# ಮುಂದಾಲೋಚನೆ ಇಲ್ಲದ ಆವಿಷ್ಕಾರ ಸಮಾಜಕ್ಕೆ ಮಾರಕ

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಆವಿಷ್ಕಾರಗಳಿಗೆ ನಿಸರ್ಗವೇ ಪ್ರೇರಣೆಯಾಗಿದೆ. ಆದರೆ, ಮುಂದಾಲೋಚನೆ ಇಲ್ಲದ ಕೆಲ ಆವಿಷ್ಕಾರಗಳು ನಿಸರ್ಗದ ಮೇಲೆ ದುಷ್ಪರಿಣಾಮ ಬೀರುತ್ತಿವೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಅಧ್ಯಕ್ಷ ಡಾ.ಎ.ಎಸ್. ಕಿರಣ್‌ಕುಮಾರ್ ಹೇಳಿದ್ದಾರೆ.



» **ಇಸ್ರೋ ಅಧ್ಯಕ್ಷ ಕಿರಣ್‌ಕುಮಾರ್ ಅಭಿಮತ**

» **ಆರ್.ವಿ. ತಾಂತ್ರಿಕ ಕಾಲೇಜು 6ನೇ ಘಟಿಕೋತ್ಸವ**

ಆರ್.ವಿ. ತಾಂತ್ರಿಕ ಕಾಲೇಜಿನಲ್ಲಿ ನಡೆದ 6ನೇ ಘಟಿಕೋತ್ಸವ ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ಪದವಿಪ್ರದಾನ ಮಾಡಿ ಮಾತನಾಡಿದರು.

ಆರೋಗ್ಯ, ರಕ್ಷಣಾ ವ್ಯವಸ್ಥೆ, ಶಿಕ್ಷಣ, ಮನರಂಜನೆ, ಸಂವಹನ ಮತ್ತು ಸಾಮಾಜಿಕ ಕ್ಷೇತ್ರದಲ್ಲಿನ ಮಹತ್ವದ ಬದಲಾವಣೆಗೆ ಮಾಹಿತಿ- ತಂತ್ರಜ್ಞಾನ ಕಾರಣವಾಗಿದೆ. ಆದರೆ, ಜಾಗತಿಕ ತಾಪಮಾನ, ಹಿಮಪ್ರವಾಹ, ಸಮುದ್ರ ಮಟ್ಟ ಏರಿಕೆ, ವಾಯುಮಾಲಿನ್ಯ, ಸಾಗರದ ಆಮ್ಲೀಕರಣ, ಅಂತರ್ಜಲ ಮಲೀನತೆ ಇತ್ಯಾದಿಯಿಂದ ಉಂಟಾಗುವ ದುಷ್ಪರಿಣಾಮಗಳು ಮುಂದಾಲೋಚನೆ ಇಲ್ಲದ ಆವಿಷ್ಕಾರಗಳ ಪ್ರತಿಫಲ ಎಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜತೆಗೆ ಸಾಮಾಜಿಕ ಕಳಕಳಿಯನ್ನು ಅಳವಡಿಸಿಕೊಂಡು ದೇಶಕ್ಕೆ ಮತ್ತು ಕಾಲೇಜಿನ ಗೌರವ ಹೆಚ್ಚಿಸಬೇಕು ಎಂದು ಆರ್.ವಿ. ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಎಂ.ಕೆ. ಪಾಂಡುರಂಗ ಶೆಟ್ಟಿ ಕಿವಿಮಾತು ಹೇಳಿದರು. ಪ್ರಾಂಶುಪಾಲ ಡಾ.ಕೆ.ಎನ್. ಸತ್ಯನಾರಾಯಣ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರತಿಭಾವತ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.